ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969
ಅಕ್ಟೋಬರ್ ಡಿಸೆಂಬರ್ 2010

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ: dvgtkvk@yahoo.com
ಸಂಪುಟ- 4, ಸಂಚಿಕೆ- 1

## ಸಿಂಚನಕ್ಕೆ ಮುನ್ನ

2010 ನೇ ಇಸವಿ ಕಡೆ ಮೂರು ತಿಂಗಳುಗಳ ಚಟುವಟಿಕೆಗಳ ಸಾರಾಂಶ ನಿಮ್ಮ ಕೈಯಲ್ಲಿದೆ. ಮುಂಗಾರಿನ ಬೆಳೆಗಳನ್ನು ಕೊಯ್ಲು ಮಾಡುವ ಸಂದರ್ಭ, ಹಿಂಗಾರಿನ ಬೆಳೆಗಳನ್ನು ಬಿತ್ತಲು ಬೇಕಾದ ಸಿದ್ದತೆಗಳ ತವಕ, ನಡುವೆ ಒಡನಾಟವುಳ್ಳ ರೈತರಿಗೆ ಅರಿವು ಹೆಚ್ಚಿಸುವ ಕಾರ್ಯಾಗಾರಗಳು, ಅಧ್ಯಯನಪೂರಿತ ಪ್ರವಾಸಗಳು, ವಿಶೇಷ ದಿನಾಚರಣೆಗಳು ಹೀಗೆ ಹಲವಾರು ಕ್ರಿಯಾತ್ಮಕ ಕಾರ್ಯಗಳಲ್ಲಿ ನಮ್ಮ ತಂಡ ತೊಡಗಿಸಿಕೊಂಡಿತ್ತು. ಸ್ವಲ್ಪ ಮಂದಗತಿಯಲ್ಲಿ ಸಾಗುತ್ತಿದ್ದ ಅನುಭವವಾಗುತ್ತಿರುವಾಗ, ವರ್ಷದ ಕಡೆಯ ದಿನಗಳು ಕೆಲ ಮಟ್ಟಿಗೆ ನಮ್ಮನ್ನು ಚುರುಕಾಗಿಸಿ ಬಿಟ್ಟಿದ್ದವು.

ಜೈವಿಕ ತಂತ್ರಜ್ಞಾನ ಇಲಾಖೆ ಅನುಧಾನಿತ ಯೋಜನೆಯ ಪಾಲುದಾರರಾದ ರೈತ ಸಮೂಹಗಳ ಸದಸ್ಯರನ್ನು ಎರಡು ಪಂಗಡಗಳಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕೃಷಿ ಮೇಳಗಳಿಗೆ ಕೊಂಡೊಯ್ದದ್ದು ವಿಶಿಷ್ಟ ಅಧ್ಯಯನ ಪ್ರವಾಸಗಳಾಗಿದ್ದವು. ಶ್ರೀ ವಿನಯ್ ಕುಲಕರ್ಣಿಯವರ ಅದ್ಭುತವೆನಿಸುವ ಹೈನುಗಾರಿಕೆ, ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆಗೆ ಭೇಟಿ ಮತ್ತು ಕೃಷಿ ಮೇಳದ ಆಕರ್ಷಕ ಮಳಿಗೆಗಳು ಧಾರವಾಡದಲ್ಲಿ ರೈತರನ್ನು ಮಂತ್ರ ಮುಗ್ಧರನ್ನಾಗಿಸಿದ್ದವು. ಹೀಗೆ ತುಮಕೂರು ಬಳಿಯ ಹಿರೇಹಳ್ಳಿಯಲ್ಲಿರುವ ಹೊಸ ಕೃಷಿ ವಿಜ್ಞಾನ ಕೇಂದ್ರವನ್ನು ನೋಡಿಕೊಂಡು ಮುಂದೆ ಬೆಂಗಳೂರು ಕೃಷಿ ಮೇಳವನ್ನು ನೋಡಿದ ರೈತರು **"ವಾಹ್"** ಎಂದು ಸಂತಸ ಪಟ್ಟಿದ್ದು ನಮ್ಮ ಕೃಷಿ ವಿಜ್ಞಾನ ಕೇಂದ್ರದ ಖುಷಿಗಳಲ್ಲೊಂದು.

ಕೃಷಿ ಇಲಾಖೆಯ ಭೂ ಚೇತನ ಕಾರ್ಯಕ್ರಮಗಳು ಮತ್ತು ಅನೇಕ ಕ್ಷೇತ್ರೋತ್ಸವಗಳಲ್ಲಿ ಭಾಗವಹಿಸಿದ್ದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ತರಬೇತಿಗೆ ಆತಿಥ್ಯ ನೀಡಿದ್ದು, ಧಾರವಾಡದಲ್ಲಿ ನಮ್ಮ ಕೃಷಿ ವಿಜ್ಞಾನ ಕೇಂದ್ರದ ವಾರ್ಷಿಕ ವರದಿ ಮಂಡನೆ ಮಾಡಿದ್ದು ಮುಂತಾದವುಗಳು ಏತನ್ಮಧ್ಯೆ ಸದ್ದಿಲ್ಲದೆ ಘಟಿಸಿದವು.

ಭತ್ತದಲ್ಲಿ ಸಿಲಿಕಾನ್ ಮಹತ್ವ ಎಂಬುದರ ಕಾರ್ಯಾಗಾರ ಬಹಳ ವಿಶೇಷವಾಗಿತ್ತು. ಡಾ. ಆರ್ ಎಸ್ ಕುಲಕರ್ಣಿ, ವಿಸ್ತರಣಾ ನಿರ್ದೇಶಕರು, ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ನಮ್ಮೆಲ್ಲರಿಗೂ ಬೆಂಬಲ ನೀಡಿದರು. ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಜಿಲ್ಲಾ ಮಟ್ಟದ ಉದ್ಘಾಟನಾ ಸಮಾರಂಭ ನಮ್ಮ ಕೇಂದ್ರದಲ್ಲಿ ಜರುಗಿ 1000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ದಾಖಲಾರ್ಹ.

ಡಿಸೆಂಬರ್‌ನಲ್ಲಿ ಚಳಿನಡುಕದ ಜೊತೆಗೆ, ಹಲವಾರು Vibrant ಕಾರ್ಯಕ್ರಮಗಳ ಕುಲುಕಾಟವು ಶುರುವಾಗಿತ್ತು. ಕೇಂದ್ರದ ಕೇಸರಿವನದಲ್ಲಿ ಅಂತರ ಬೆಳೆಗಳಾಗಿ ಬೆಳೆದಿದ್ದ ತೊಗರಿ, ವೆಲ್‌ವೆಟ್ ಬೀನ್ಸ್ ಮುಂತಾದವುಗಳ ಕೊಯ್ಲು ಭರದಿಂದ ಸಾಗಿದೆ. ಕೃಷಿಯಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಪಶು ಇಲಾಖೆಯ ಸಹಯೋಗದೊಂದಿಗೆ ನಾವು ಆಯೋಜಿಸಿದ್ದ ಪಶು ಚಿಕಿತ್ಸಾ ಶಿಬಿರದಲ್ಲಿ ಹಳೇ ಬಿಸಲೇರಿ ಸಮಸ್ತ ಜನತೆ ಸಕ್ರೀಯವಾಗಿ ಪಾಲ್ಗೊಂಡಿದ್ದು ನಮ್ಮ ಶ್ರಮಕ್ಕೆ ಸಂದ ಶಭಾಸ್‌ಗಿರಿ. ಭತ್ತದಲ್ಲಿ ಬೀಜೋತ್ಪಾದನೆ ಕಾರ್ಯಾಗಾರವನ್ನು ಡಾ. ಟಿ.ಎಚ್.ಗೌಡ. ಸಹ ವಿಸ್ತರಣಾ ನಿರ್ದೇಶಕರು, ಕತ್ತಲಗೆರೆ (ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ) ರವರು ಸಂಪನ್ಮೂಲ ತಜ್ಞರಾಗಿ ನಡೆಸಿಕೊಟ್ಟರು.

ವರ್ಷದ ಕಡೇವಾರ, ರಾಜಸ್ತಾನದ ಉದಯಪುರದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ 5ನೇ ರಾಷ್ಟ್ರೀಯ ಸಮ್ಮೇಳನ ನಡೆಯಿತು, ಬಹಳ ವಿಶೇಷವಾದ ಸಮ್ಮೇಳನವಾಗಿತ್ತು. ಕೃಷಿ ಉದ್ಯಮಿಗಳಾಗಿ ಕೃಷಿ ಅನುಶೊಧನೆ ಎಂಬ ಮೂಲ ಶೀರ್ಷಿಕೆಯಡಿಯಲ್ಲಿ ಅನೇಕ ವಿಚಾರಗಳ ಮಂಥನ ಕಾರ್ಯಕ್ರಮಗಳು ಜರುಗಿದವು. ಸರೋವರಗಳ ನಾಡಿಂದ ಹಿಂತಿರುಗಿ ಬರುವಾಗ ಚಳಿಗಾಲದ ಮಹಿಮೆಯಿಂದ ವಿಮಾನಗಳ ಹಾರಾಟ ವೇಳಾಪಟ್ಟಿ ಏರುಪೇರಾಗಿ, ನಿಲ್ದಾಣಗಳಲ್ಲಿ ಬಸವಳಿದು, ಹಾಗೂ ಹೀಗೂ, ಬೆಂಗಳೂರು ತಲುಪಿದಾಗ ನಮ್ಮಲ್ಲಿ ಕೆಲವರ ಲಗೇಜುಗಳು ತಪ್ಪಿಹೋಗಿ (ನನ್ನದೂ ಸೇರಿಕೊಂಡು), ಪರದಾಟ ಬೆಳಗಿನ ಜಾವವನ್ನು ಮೀರಿತ್ತು. ತಪ್ಪಿಹೋದ ಲಗೇಜು ವಾಪಾಸು ಕೈ ಸೇರುವಲ್ಲಿಗೆ ಹೊಸವರ್ಷವನ್ನು ಸ್ವಾಗತಿಸಲು ನಿಮ್ಮೆಲ್ಲರೊಂದಿಗೆ ನಾನು ಸಿದ್ದನಾಗಿದ್ದೆ.

ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ನಮಸ್ತೆ.

–ಡಾ. ದೇವರಾಜ ಟಿ.ಎನ್.




**ಕೃಷಿಯಲ್ಲಿ ಮಹಿಳಾ ದಿನಾಚರಣೆ :** ಡಿಸೆಂಬರ್ 4 ರಂದು ದಾವಣಗೆರೆ ತಾಲ್ಲೂಕು ಹಳೇಬಿಸಲೇರಿ ಗ್ರಾಮದಲ್ಲಿ "**ಕೃಷಿಯಲ್ಲಿ ಮಹಿಳಾ ದಿನಾಚರಣೆ**"ಯನ್ನು ಆಚರಿಸಲಾಯಿತು.




ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆ, ಧಾರವಾಡ ಮತ್ತು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ "**ಮೇವಿನ ಬೆಳೆಗಳ ಕ್ಷೇತ್ರೋತ್ಸವ**" (22–10–2010, ಕಂದಗಲ್ಲು, ದಾವಣಗೆರೆ ತಾಲ್ಲೂಕು




ಪಶು ವೈದ್ಯ ಸೇವಾ ಇಲಾಖೆ, ದಾವಣಗೆರೆ ಇವರೊಂದಿಗೆ ಕೇಂದ್ರದವತಿಯಿಂದ ಹಳೇಬಿಸಲೇರಿ ಗ್ರಾಮದಲ್ಲಿ (4–12–2010) "**ಪಶು ಚಿಕಿತ್ಸಾ ಶಿಬಿರ**" ವನ್ನು ಹಮ್ಮಿಕೊಳ್ಳಲಾಗಿತ್ತು. 200 ರಾಸುಗಳಿಗೆ ಜಂತುಹುಳು ನಿವಾರಕ ಔಷಧಿ ಮತ್ತು ಕಾಲುಬಾಯಿ ಬೇನೆ ಲಸಿಕೆ ನೀಡಲಾಯಿತು. 50 ರಾಸುಗಳಿಗೆ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಯಿತು.




ಡಾ. ಆರ್. ಎಸ್. ಕುಲಕರ್ಣಿ, ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ಬೆಂಗಳೂರು ಮತ್ತು ಡಾ. ಟಿ. ಹೆಚ್. ಗೌಡ ಸಹ ವಿಸ್ತರಣಾ ನಿರ್ದೇಶಕರು, ಕತ್ತಲಗೆರೆ ಇವರು ಕೇಂದ್ರದಲ್ಲಿರುವ "**ಹಸಿರುಮನೆ**" ವೀಕ್ಷಿಸುತ್ತಿರುವುದು.



"**ಟೊಮ್ಯಾಟೋದಲ್ಲಿ ಸಮಗ್ರ ಬೆಳೆ ನಿರ್ವಹಣೆ**" ರೈತ ಕ್ಷೇತ್ರ ಪಾಠಶಾಲೆಯ ಕ್ಷೇತ್ರೋತ್ಸವದಲ್ಲಿ ಶಿಭಿರಾರ್ಥಿಗಳೊಂದಿಗೆ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಕೆ.ಪಿ. ಬಸವರಾಜ್ ರವರ ಸಮಾಲೋಚನೆ.







ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಡಾ. ಮನುಕುಲಕರ್ಣಿ ಮತ್ತು ಶ್ರೀ ಕೆ.ಪಿ. ಬಸವರಾಜ್ ಕೇಂದ್ರದಲ್ಲಿನ "**ಹಸಿರು ಮನೆ ಮತ್ತು ಹೈನುಗಾರಿಕಾ ಘಟಕ**"ವನ್ನು ವೀಕ್ಷಿಸಿದರು.



22–11–2010 ರಂದು ಮಣ್ಣು ವಿಜ್ಞಾನ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸಹಯೋಗದೊಂದಿಗೆ ಕೇಂದ್ರದಲ್ಲಿ ಹಮ್ಮಿಕೊಂಡ **“ಭತ್ತದಲ್ಲಿ ಸಿಲಿಕಾನ್ ಮಹತ್ವ”** ಕಾರ್ಯಾಗಾರದಲ್ಲಿ ಡಾ. ಎನ್. ಬಿ. ಪ್ರಕಾಶ್, ಸಹ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ ನೀಡಿದರು.



ಡಾ. ಎಂ. ಮಹಾದೇವಪ್ಪ, ವಿಶ್ರಾಂತ ಕುಲಪತಿಗಳು, ಧಾರವಾಡ ಇವರು ಕೇಂದ್ರದಲ್ಲಿನ "**ಮೀನುಗಾರಿಕಾ ಪ್ರಾತ್ಯಕ್ಷಿಕ ಘಟಕ**"ವನ್ನು ವೀಕ್ಷಿಸಿದರು (19–11–2010).





**ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ ಪ್ರಾಯೋಜಿತ**

**ಎರೆಗೊಬ್ಬರ ಕೊಯ್ಲಿನ ತಂತ್ರಜ್ಞಾನ** **ಶೈಕ್ಷಣಿಕ ಪ್ರವಾಸ (ಕೃಷಿಮೇಳ, ಧಾರವಾಡ)**



ಜಿಲ್ಲಾ ಪಂಚಾಯತ್, ದಾವಣಗೆರೆ ಪ್ರಾಯೋಜಿತ ಪಂಚಾಯತ್ ಡೆವಲಪ್‌ಮೆಂಟ್ ಆಫೀಸರ್ಸ್ ಮತ್ತು ಗ್ರೇಡ್–1 ಪಂಚಾಯತ್ ಕಾರ್ಯದರ್ಶಿಗಳ "**ಬುನಾದಿ ತರಬೇತಿ**" ಕಾರ್ಯಕ್ರಮಕ್ಕೆ ಕೇಂದ್ರವು ಅತಿಥ್ಯ ವಹಿಸಿತ್ತು.



ಕಡಲೆಯಲ್ಲಿ "ಸಮಗ್ರ ಬೆಳೆ ನಿರ್ವಹಣೆ" ಮುಂಚೂಣಿ ಪ್ರಾತ್ಯಕ್ಷಿಕೆ (ವೈಜ್ಞಾನಿಕ ಕ್ಷೇತ್ರ ಭೇಟಿ)

## ಈ – ಟಿವಿ ಅನ್ನದಾತ ಕಾರ್ಯಕ್ರಮಗಳು

♦ಬದನೆ ಮತ್ತು ಕಲ್ಲಂಗಡಿಯಲ್ಲಿ ಕಾಯಿಕೊರಕದ ನಿರ್ವಹಣೆ :– ಶ್ರೀ ಪ್ರಸನ್ನಕುಮಾರ ಎನ್. (7–10–2010).

♦ಭತ್ತದಲ್ಲಿ ಕಂದುಜಿಗಿಹುಳು ಮತ್ತು ಎಲೆಸುರುಳಿ ಹುಳುವಿನ ನಿರ್ವಹಣೆ :– ಶ್ರೀ ಪ್ರಸನ್ನಕುಮಾರ ಎನ್. (10–10–2010).

## ಆಕಾಶವಾಣಿ ಕಾರ್ಯಕ್ರಮಗಳು (ಭದ್ರಾವತಿ)

♦ಸಮಸ್ಯಾತ್ಮಕ ಮಣ್ಣುಗಳ ನಿರ್ವಹಣೆ :– ಡಾ. ಪ್ರದೀಪ ಹೆಚ್. ಎಮ್. (13–11–2010).

♦ಶುದ್ಧಹಾಲು ಉತ್ಪಾದನೆ :– ಡಾ. ಜಯದೇವಪ್ಪ ಜಿ.ಕೆ. ( 20–12–2010).

♦ಬೇಳೆ ಕಾಳುಗಳ ಉತ್ಪಾದನಾ ತಾಂತ್ರಿಕತೆಗಳು :– ಶ್ರೀ ಮಲ್ಲಿಕಾರ್ಜುನ ಬಿ.ಓ. (20–12–2010).

## ಕೃಷಿ ಮುನ್ಸೂಚನೆಗಳು

### ಬೇಸಾಯ ಶಾಸ್ತ್ರ

**ಭತ್ತ:**

- ಭತ್ತದಲ್ಲಿ ಶಿಫಾರಸ್ಸು ಮಾಡಿದ ಗೊಬ್ಬರವನ್ನು ಬಳಸಿ, ಎಕರೆಗೆ 40:20:20 ಎನ್.ಪಿ.ಕೆ.ಕೆ.ಜಿ.
- ಸಸಿ ಮಡಿಯಲ್ಲಿ ಬೆಳವಣಿಗಾಗಿ 17:17:17 ಕೆ.ಜಿ. ಯನ್ನು 100 ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.
- **ಜೈವಿಕ ಗೊಬ್ಬರ:** ಅಯೋಸ್ಪೈರಿಲಂ ಜೀವಾಣು ಗೊಬ್ಬರ ಬಳಸುವ ವಿಧಾನ.
- ಎಕರೆ ಪ್ರದೇಶಕ್ಕೆ ಬೇಕಾಗುವ ಬಿತ್ತನೆ ಬೀಜವನ್ನು 400 ಗ್ರಾಂ. ಅಝೋಸ್ಪೈರಿಲಂನೊಂದಿಗೆ ಉಪಚರಿಸುವುದು.
- 800 ಗ್ರಾಂ ಜೈವಿಕ ಗೊಬ್ಬರವನ್ನು ನೇರವಾಗಿ ಸಸಿ ಮಡಿಯಲ್ಲಿ ಅಥವಾ ನಾಟಿ ಮಾಡುವ ಪ್ರದೇಶಕ್ಕೆ ಎರಚುವುದು.
- ಸಸಿ ಮಡಿಯಿಂದ ಕಿತ್ತ ನಂತರ ಸಸಿ ಬೇರುಗಳನ್ನು 400 ಗ್ರಾಂ ಅಝೋಸ್ಪೈರಿಲಂ ಜೈವಿಕ ಗೊಬ್ಬರದ ಮಿಶ್ರಣದಲ್ಲಿ ಅದ್ದಿ ನಾಟಿ ಮಾಡುವುದು.

### ಸಸ್ಯ ಸಂರಕ್ಷಣೆ ಮತ್ತು ತೋಟಗಾರಿಕೆ

**ಕಾಂಡ ಕೊರಕ:** ಮರಿಹುಳುಗಳು ಸುಳಿ ಎಲೆಯ ಬುಡವನ್ನು ಕತ್ತರಿಸುತ್ತವೆ. ಸುಳಿ ಎಲೆ ಒಣಗಿ ಇಳುವರಿ ಕುಂಠಿತವಾಗುತ್ತದೆ. ತೆನೆಗಳು ಹಾಲು ತುಂಬುವ ಹಂತದಲ್ಲಿದ್ದರೆ ಮರಿಗಳು ತೆನೆ ಬುಡವನ್ನು ಕತ್ತರಿಸುವುದರಿಂದ ಬಿಳಿ ತೆನೆಗಳು ಉಂಟಾಗುತ್ತವೆ.

**ಹತೋಟಿ:** **ಸಸಿಮಡಿಯಲ್ಲಿ ಮೋಹಕ ಬಲೆಗಳ ಅಳವಡಿಕೆ, ಬೇವು ಆಧಾರಿತ ಕೀಟನಾಶಕಗಳ ಸಿಂಪರಣೆ (3–5 ಮಿಲೀ), ನಾಟಿಮಾಡುವಾಗ ತುದಿ ಚಿವುಟುವಿಕೆ, ಕ್ಲೋರೋಪೈರಿಪಾಸ್ (2 ಮೀ.ಲೀ/ ಲೀ.) ಅಥವಾ ಕಾರ್ಟಾಪ್ ಹೈಡ್ರೋಕ್ಲೋರೈಡ್ 20 ಕೆ.ಜಿ/ ಎಕರೆ ಬಳಕೆ.**

**ಕಡಲೆ**

**ಕಾಯಿ ಕೊರಕ:** ಮರಿ ಹುಳುಗಳು ಎಲೆಯನ್ನು ಕೆರೆದು ತಿನ್ನುವುದರಿಂದ ಗಿಡಗಳು ಒಣಗುತ್ತವೆ. ಕಾಯಿ ಕಟ್ಟುವ ಹಂತದಲ್ಲಿ ಒಂದು ಕೀಟ 20–30 ಕಡಲೆ ಕಾಯಿಗಳನ್ನು ತಿಂದು ನಾಶ ಮಾಡುತ್ತದೆ.

**ಹತೋಟಿ:** ಎಕರೆಗೆ 2 ರಂತೆ ಮೋಹಕ ಬಲೆ ಅಳವಡಿಕೆ, ತತ್ತಿ ನಾಶಕಗಳಾದ ಪ್ರೋಪೊನೊಪಾಸ್ 3 ಮಿ.ಮೀ/ ಲೀ ಅಥವಾ ಥಯೋಡಿಕಾರ್ಬ್ (1 ಗ್ರಾಂ / ಲೀ.) ಸಿಂಪರಣೆ. ಭಾದೆ ಹೆಚ್ಚಾದಾಗ ರೈನಾಕ್ಷಿಪಯರ್ (ಕೊರಾಜನ್) 0.15 ಮಿ.ಲೀ/ ಲೀ ಅಥವಾ ಇಂಡಾಕ್ಸಿಕಾರ್ಬ್ 0.3 ಮಿ.ಲೀ/ಲೀ ಸಿಂಪರಣೆ.

**ಸೂರ್ಯಕಾಂತಿ**

**ತುದಿ ಸಾಯುವ ನಂಜು ರೋಗ:** ಎಲೆಯ ಒಂದು ಭಾಗ ಮತ್ತು ಹೂವಿನ ಸುಳಿಗಳು ಸುಟ್ಟಂತೆ ಕಾಣುತ್ತದೆ. ತೆನೆಯ ಹಿಂಭಾಗದ ಭಾಗಗಳು ಕಂದು ಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣುತ್ತದೆ. ರೋಗ ತಗಲಿದ ಗಿಡಗಳು ಗಿಡ್ಡಗಿರುತ್ತವೆ.

**ಹತೋಟಿ:** ಹೊಲದ ಸುತ್ತವಿರುವ ಕಳೆಗಳ ನಿರ್ಮೂಲನೆ, ಇಮಿಡಾಕ್ಲೊಪ್ರಿಡ್ (0.5 ಮಿ.ಲೀ/ ಲೀ.) ಅಥವಾ ಅಕ್ಸಿಡೆಮೆಟಾನ್ ಮೀಥೈಲ್ (1.5 ಮಿ ಲೀ/ ಲೀ.) ಸಿಂಪರಣೆ.

**ಅಡಿಕೆ**

ಪ್ರಸ್ತುತ ಸಮಯದಲ್ಲಿ ಹಿಂಗಾರು ಒಣಗುವ ಮತ್ತು ಎಳೆಕಾಯಿ ಉದುರುವ ರೋಗದ ಸಮಸ್ಯೆ ಉಲ್ಬಣಿಸಲಿದ್ದು, ಹವಾಮಾನ ವೈಪರೀತ್ಯಗಳಿಂದ, ಕಾಲಕ್ಕೆ ಸರಿಯಾಗಿ ಪರಾಗ ಸ್ಪರ್ಶ ಆಗದೆ ಇರುವಿಕೆ, ಮಣ್ಣಿನಲ್ಲಿ ಪೋಷಕಾಂಶಗಳ ಕೊರತೆ, ನೀರಿನ ಕೊರತೆ ಇದಕ್ಕೆ ಕಾರಣಗಳು.

**ಹತೋಟಿ: ಮ್ಯಾಂಕೋಜೆಬ್ ( ಡೈಥೇನ್ ಎಂ.–45)** ಶೇಕಡಾ 0.3 ರ ಪ್ರಮಾಣದ ದ್ರಾವಣವನ್ನು ಪ್ರತಿ ಲೀಟರ್ ನೀರಿಗೆ 3 ಗ್ರಾಂ ನಂತೆ ಹೂ ಗೊಂಚಲು ಅರಳುವ ಸಮಯದಲ್ಲಿ ನಂತರ 20–25 ದಿನಗಳ ಅಂತರದಲ್ಲಿ ಇನ್ನೊಮ್ಮೆ ಸಿಂಪಡಿಸಬೇಕು.

**ನುಶಿ :** ಕಂದು ಬಣ್ಣದ ನುಶಿಗಳು ಎಲೆಯ ಕೆಳಗಿನ ಭಾಗದಿಂದ ರಸ ಹೀರುತ್ತವೆ. ಕೈಯಿಂದ ಎಲೆಗಳನ್ನು ಎಳೆದಾಗ ಕೆಂಪು ಬಣ್ಣ ಬೆರಳುಗಳಿಗೆ ಅಂಟುತ್ತದೆ. ಗಿಡಗಳು ಕೆಂಪಾಗಿ ಬೆಳವಣಿಗೆ ಕುಂಠಿತವಾಗುತ್ತದೆ.

**ಹತೋಟಿ:** ಡೈಕೊಪಾಲ್ (2.5 ಮಿ.ಲೀ/ ಲೀ.) ಎಲೆಯ ಹಿಂಬಾಗಕ್ಕೆ ಸಿಂಪರಣೆ.

**ಪಶು ವಿಜ್ಞಾನ**

* ಹೈನು ರಾಸುಗಳಿಗೆ ಅವಶ್ಯಕವಾಗಿ ಬೇಕಾಗಿರುವ ದ್ವಿದಳ ದಾನ್ಯದ ಮೇವುಗಳಾದ ಕುದುರೆ ಮೆಂತೆ, ಬರಸೀಮ್, ಮೇವಿನ ಅಲಸಂದೆ ಮತ್ತು ಇತ್ಯಾದಿಗಳನ್ನು ಬೆಳೆಯಲು ಇದು ಸೂಕ್ತ ಸಮಯವಾಗಿರುತ್ತದೆ.
* ಜಾನುವಾರುಗಳಿಗೆ ಮೇವಿನ ಕೊರತೆ ತೀವ್ರವಾಗಿದ್ದು ಲಭ್ಯವಿರುವ ಒಣಮೇವನ್ನು ಸಸಾರಜನಕ ವಸ್ತುಗಳು ಖನಿಜ ಲವಣಗಳು ಹಾಗೂ ಕಾಕಂಬಿಯಂತಹ ಶಕ್ತಿದಾಯಕ ಘಟಕಗಳಿರುವ ವಸ್ತುಗಳಿಂದ ಪೌಷ್ಠೀಕರಿಸಿ ಬಳಸುವುದರಿಂದ ಮೇವನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚಿನ ಲಾಭವನ್ನು ಪಡೆಯಬಹುದಾಗಿದೆ.
* ಭೂ ರಹಿತ ಕಾರ್ಮಿಕರು ಕಡಿಮೆ ಬಂಡವಾಳವನ್ನು ಬಳಸಿಕೊಂಡು ಲಾಭದಾಯಕ ಮೊಲಸಾಕಣೆ ಮಾಡಬಹುದಾಗಿದೆ. ಇತ್ತೀಚೆಗೆ ಮೊಲ ಸಾಕಣೆಯು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ.

**ಮೀನು ಕೃಷಿ**

ಮೀನು ಕೃಷಿ ಕೈಗೊಂಡಿರುವ ಕೃಷಿಕರು ಕೊಳಗಳಲ್ಲಿ ನೀರಿನ ಮಟ್ಟ 5 ಅಡಿಗಳಿಗಿಂತ ಕೆಳಗೆ ಹೋಗದಂತೆ ನೋಡಿಕೊಳ್ಳಬೇಕು. ಆಲ್ಗೆಗಳು ಹೆಚ್ಚಾಗಿ ಆಮ್ಲಜನಕ ಮಟ್ಟದಲ್ಲಿ ಏರು ಪೇರಾಗದಂತೆ ಎಚ್ಚರ ವಹಿಸಬೇಕು. ಸಗಣಿ ಪ್ರಮಾಣವನ್ನು ಹೆಚ್ಚಿಸಬಾರದು. ಮೇಲು ಆಹಾರ ನೀಡುತ್ತಿದ್ದಲ್ಲಿ ಮೀನಿನ ಒಟ್ಟು ತೂಕದ 1–2% ಗೆ ಸರಿತೂಗಿಸಿ ಕೊಡಬೇಕು. ಆಹಾರವನ್ನು ಚೀಲಗಳಲ್ಲಿ ಕಟ್ಟಿ ನಿಗದಿತ ಸ್ಥಳ ಮತ್ತು ಸಮಯದಲ್ಲಿ ನೀಡಿದರೆ ಆಹಾರ ಬಳಕೆ ಪರಿಣಾಮಕಾರಿಯಾಗುತ್ತದೆ.

**ಮಣ್ಣು ವಿಜ್ಞಾನ (ಟಿಪ್, ಟಿಪ್, ಟಿಪ್ಸ್)**

* ಒಂದು ಫಾರ್ಮ ಕೋಳಿ ತನ್ನ ಜೀವಿತಾವಧಿಯಲ್ಲಿ 450 ಲೀಟರ್ ನೀರು ಬಳಸುತ್ತದೆ. ಅದಕ್ಕಿಂತ ಹೇರಳವಾಗಿ ದವಸ ಧಾನ್ಯ ಸೇವಿಸುತ್ತದೆ. ಎಮ್ಮೆಯೊಂದು ಒಂದು ಲೀಟರ್ ಹಾಲು ನೀಡಲು 4 ಲೀಟರ್ ನೀರು ಬಳಸುತ್ತದೆ, ಅಲ್ಲದೇ ಅದು ತಿನ್ನುವುದು ಹುಲ್ಲು, ಮೇವನ್ನೇ ಹೊರತು ದವಸ ಧಾನ್ಯವನ್ನಲ್ಲ.
* ಗುಜರಾತ್‌ನ ರಾಸಾಯನಿಕ ಗೊಬ್ಬರ ಕಾರ್ಖಾನೆ ದಿನಕ್ಕೆ 117 ಲಕ್ಷ ಲೀಟರ್ ಶುದ್ಧ ನೀರನ್ನು ಬಳಸಿ, ರಾಸಾಯನಿಕ ಗೊಬ್ಬರ ತಯಾರಿಸುತ್ತದೆ. ಇಂತಹ ಗೊಬ್ಬರಗಳನ್ನು ರೈತರು ಅಸಮರ್ಪಕವಾಗಿ ಅವಶ್ಯಕತೆಗಿಂತ ಅಧಿಕವಾಗಿ ಮಣ್ಣಿಗೆ ಹಾಕಿ ಇರುವ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದ್ದಾರೆ.
* ಊರಿನಲ್ಲಿ ಹತ್ತಾರು ಗುಡಿ ಕಟ್ಟಿಸುವುದಕ್ಕಿಂತ, ಊರಿಗೊಂದು ಕೆರೆ ಕಟ್ಟಿಸುವುದು ಲೇಸು.
* ಜಾತಿಗೊಂದು ಮಠ ಕಟ್ಟುವುದರ ಬದಲು , ಮೊದಲು ಆ ಜನಗಳ ನೀರಿನ ಬವಣೆ ಪರಿಹರಿಸಿ.
* ಒಂದು ಮಿ.ಮೀ (1 ಸೆಂಟಿ ಮೀಟರ್‌ನ ಹತ್ತನೇ ಒಂದು ಭಾಗ ) ಮಳೆ ಒಂದು ಚದರ ಮೀಟರ್ ಪ್ರದೇಶದಲ್ಲಿ ಬಿದ್ದರೆ ಒಂದು ಮೀಟರ್ ನೀರು ದೊರೆಯುತ್ತದೆ. 30 X 40 ಅಡಿ ನಿವೇಶನ 1200 ಚದರ ಅಡಿ ವಿಸ್ತೀರ್ಣ ಹೊಂದಿರುತ್ತದೆ. ಇಂತಹ ಮನೆಯ ಮೇಲೆ ಕೇವಲ 10 ಮಿ.ಮೀ ( 1 ಸೆಂ.ಮೀ) ಮಳೆ ಬಿದ್ದರೆ , 1200 ಮೀಟರ್ ನೀರು ಸಂಗ್ರಹವಾಗುತ್ತದೆ. ದಾವಣಗೆರೆಯ ವಾರ್ಷಿಕ ಮಳೆಯ ಪ್ರಮಾಣ 68 ಸೆ.ಮೀ ಅಂದರೆ 30 X 40 ಚದರಡಿ ವಿಸ್ತೀರ್ಣದ ಮನೆ ಚಾವಣಿಯಿಂದ ಒಂದು ವರ್ಷದಲ್ಲಿ ಕನಿಷ್ಠ 81600 ಲೀಟರ್ ನೀರು ಸಂಗ್ರಹಿಸಬಹುದು. ಇದರಲ್ಲಿ ಶೇ 80 ಬಳಕೆಯೋಗ್ಯ ಎಂದು ಪರಿಗಣಿಸಿದರೂ 65280 ಲೀಟರ್ ಶುದ್ಧ ನೀರು ಪುಕ್ಕಟೆಯಾಗಿ ದೊರೆತಂತೆ).


**ಸಂಪಾದಕರು: ಡಾ. ದೇವರಾಜ ಟಿ. ಎನ್.**

ಸಹ ಸಂಪಾದಕರು: ಶ್ರೀ ಪ್ರಸನ್ನಕುಮಾರ ಎನ್., ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಮತ್ತು ಡಾ. ಪ್ರದೀಪ್ ಹೆಚ್ ಎಂ.

ಪ್ರಕಾಶಕರು : ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ : 253341.